2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ, ದಾವಣಗೆರೆ

SC/ST. No.09/2020

ಫಿರ್ಯಾದಿದಾರರು ವಿರುದ್ಧ ಆರೋಪಿತರು

| ಫಿರ್ಯಾದಿದಾರರು | ಆರೋಪಿತರು |
| --- | --- |
| ರಾಜ್ಯದ ಪರವಾಗಿ ವಿದ್ಯಾನಗರ ಪೋಲೀಸ್ ಠಾಣೆ, ದಾವಣಗೆರೆ | ನಾಗರಾಜ.ಕೆ.ಹೆಚ್. ತಂದೆ ಹನುಮಂತಪ್ಪ.ಕೆ., ವಯಸ್ಸು 48 ವರ್ಷ, ವಾಸಃ ನಂ.2198/ಎ 15, 3 ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ. |

ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ ಮತ್ತು ವಿಚಾರಣೆ

ಪ್ರಶ್ನೆಃ 1 ಈ ಪ್ರಕರಣದಲ್ಲಿ ಪ್ರಾ.ಸಾ.1 ವೈ.ರಾಮಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ತಾವು ಪರಿಶಿಷ್ಟ ಜಾತಿಯ ಬೋವಿ ಮತ್ತು ವಡ್ಡ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ತನಗೆ ಈ ಪ್ರಕರಣದ ಆರೋಪಿತನಾದ ನಿನ್ನ ಪರಿಚಯ ಇರುತ್ತದೆ. ನೀನು ಮೇಲ್ವರ್ಗಕ್ಕೆ ಸೇರಿದ ಲಿಂಗಾಯತ ಜಾತಿಗೆ ಸೇರಿದವನಾಗಿರುವುದಾಗಿಯೂ, ದಿಃ 12-11-2019 ರಂದು ದಾವಣಗೆರೆ ಮಹಾನಗರ ಪಾಲಿಕೆಯ ಚುನಾವಣೆ ಇದ್ದು, ಆ ದಿನ ಆರೋಪಿತನಾದ ನೀನು ತಮ್ಮ ಮನೆಯ ಎದುರು ಕುರ್ಚಿ ಹಾಕಿಕೊಂಡು ಅಲ್ಲಿರುವ ಜನರನ್ನು ಗುಂಪುಗೂಡಿಸಿಕೊಂಡು ತನ್ನ ಮನೆಯನ್ನು ತೋರಿಸಿ ಇದೇ ನೋಡಿ ವಡ್ಡ ಸೂಳೇಮಗ ರಾಮನ ಮನೆಯೆಂದು ಕೈ ಬೆರಳು ತೋರಿಸಿ ಹೇಳುತ್ತಿರುವುದು ತನ್ನ ಗಮನಕ್ಕೆ ಹಾಗೂ ಅಲ್ಲಿದ್ದ ಉಳಿದವರ ಗಮನಕ್ಕೆ ಬಂದಿರುತ್ತದೆ. ನಂತರ ಈ ವಿಷಯವನ್ನು ಗಮನಿಸಿ ತಾನು ಅಲ್ಲಿಂದ ದಾವಣಗೆರೆಯ ಪೋಲೀಸ್ ಅಧೀಕ್ಷಕರಾದ ಹನುಮಂತರಾಯ ಎನ್ನುವವರಿಗೆ ದೂರವಾಣಿ ಮಾಡಿ ವಿಷಯ ತಿಳಿಸಿರುತ್ತೇನೆ. ನಂತರ ಕೂಡಲೇ ವೃತ್ತ ನಿರೀಕ್ಷಕರಾದ ತಿಮ್ಮಣ್ಣ ಹಾಗೂ ವಿದ್ಯಾನಗರ ಪೋಲೀಸ್ ಠಾಣೆಯ ಪೋಲೀಸ್ ಉಪನಿರೀಕ್ಷಕರಾದ ರೂಪ ಎನ್ನುವವರು ಸ್ಥಳಕ್ಕೆ ಬಂದು ಸದರಿ ಆರೋಪಿಯಾದ ನಿನ್ನ ಹಾಗೂ ನಿನ್ನ ಜೊತೆಯಿದ್ದ ವ್ಯಕ್ತಿಗಳನ್ನು ಅಲ್ಲಿಂದ ಕಳುಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 2 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಸಂಜೆ 8-20 ಗಂಟೆಯ ಸುಮಾರಿನಲ್ಲಿ ಆರೋಪಿತನಾದ ನೀನು ತನ್ನ ಮೊಬೈಲ್ ನಂಬರ್ ಆದ 9448053663 ಇದಕ್ಕೆ ದೂರವಾಣಿ ಮಾಡಿ ಯಾರು ರಾಮಪ್ಪ

ಮಾತನಾಡುತ್ತಿರುವುದಾ ಎಂದು ಕೇಳಿರುವುದಾಗಿಯೂ, ಆ ಸಮಯದಲ್ಲಿ ತಾನು ತನ್ನ ಪತ್ನಿಯ ಜೊತೆ ಹೊರಗಡೆ ಹೋಗಲು ತಯಾರಾಗಿ ನಿಂತಿದ್ದೆ. ಆಗ ಆ ಕಡೆಯಿಂದ ತಾನು ಲೋಕಿಕೆರೆ ನಾಗರಾಜ ಮಾತನಾಡುತ್ತಿರುವುದು ಎಂದು ಹೇಳಿರುವುದಾಗಿಯೂ, ಅಲ್ಲದೇ ತನ್ನನ್ನು ಉದ್ದೇಶಿಸಿ ನೀನು ಎಂತಹ ಮಗ ಎಂದು ಗೊತ್ತಿದೆ, ಎದುರಿಗೆ ಬಂದು ಮಾತನಾಡು ಎಂದು ಹೇಳಿರುವುದಲ್ಲದೇ, ಅತ್ಯಂತ ಹೀನಾಯ ಶಬ್ದಗಳನ್ನು ಉಪಯೋಗಿಸಿ ತನ್ನ ಜೊತೆ ಮಾತನಾಡಿರುವುದಾಗಿಯೂ, ಅಲ್ಲದೇ ತನಗೆ ನೀನು ಎಲ್ಲಿ ಇರುತ್ತೀಯೋ ಅಲ್ಲಿಗೆ ಬಂದು ನಿನ್ನನ್ನು ಸುಟ್ಟು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುವುದಾಗಿಯೂ, ಅಲ್ಲದೇ ತನ್ನ ಪ್ರಾಣಕ್ಕೆ ಬೆದರಿಕೆ ಹಾಕಿ ತನ್ನ ಜಾತಿಯ ಕುರಿತಾಗಿ ನಿಂದಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆಃ 3 ಮುಂದುವರೆದು ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 25-04-2019 ರಂದು ದಾವಣಗೆರೆಯಲ್ಲಿ ತನ್ನ ವಿರುದ್ಧ ಮಾಡಲಾದ ಪ್ರತಿಭಟನೆಯಲ್ಲಿ ಆರೋಪಿತನಾದ ನೀನು ಮುಖ್ಯ ಪಾತ್ರ ವಹಿಸಿದ್ದು, ಆ ಸಮಯದಲ್ಲಿ ನೀನು ತನ್ನ ಭಾವಚಿತ್ರಕ್ಕೆ ಚಪ್ಪಲಿ ಹಾರವನ್ನು ಹಾಕಿ ಅತ್ಯಂತ ಹೀನಾಯ ರೀತಿಯಲ್ಲಿ ಅವಹೇಳನ ಮಾಡಿದ ಕಾರಣ ತಾನು ನಿನ್ನ ವಿರುದ್ಧ ದೂರು ದಾಖಲಿಸಿದ್ದು, ಸದರಿ ದೂರು ಸದರಿ ದೂರು ಬಡಾವಣೆ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ 66/2019 ಎಂದು ದಾಖಲಾಗಿದ್ದು, ಅದೇ ದ್ವೇಷದಿಂದ ಆರೋಪಿತನಾದ ನೀನು ತನ್ನ ವಿರುದ್ಧ ಈ ರೀತಿಯಾಗಿ ವರ್ತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ -4 ಈ ಪ್ರಕರಣದಲ್ಲಿ ಫ್ರಾ.ಸಾ.2 ವಿನಯ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12-11-2019 ರಂದು ಮಹಾನಗರ ಪಾಲಿಕೆಯ ಚುನಾವಣೆ ಇತ್ತು. ತಮ್ಮ ಮನೆಯ ಎದುರು ಸೆಂಟ್ ಜಾನ್ ಶಾಲೆ ಇದ್ದು, ಅಲ್ಲಿ ಮತ ಕೇಂದ್ರ ಸ್ಥಾಪನೆಯಾಗಿತ್ತು. ಆ ಸಮಯದಲ್ಲಿ ತಮ್ಮ ಮನೆಯ ಎದುರು ಇರುವ ರಸ್ತೆಯ ಅಕ್ಕಪಕ್ಕದಲ್ಲಿ ಬೇರೆ ಬೇರೆ ಪಕ್ಷದ ಜನರು ಮತದಾರರಿಗೆ ಚೀಟಿ ಬರೆದು ಕೊಡುವ ಕುರಿತಾಗಿ ಖುರ್ಚಿ ಟೇಬಲ್ ಗಳನ್ನು ಹಾಕಿಕೊಂಡು ಕುಳಿತಿದ್ದರು. ನಂತರ ಆ ಸಮಯದಲ್ಲಿ ತಮ್ಮ ಮನೆಯ ಎದುರು ಸ್ಕಾರ್ಪಿಯೋ ಹಾಗೂ ಪೋರ್ಡ್ ಕಾರುಗಳಲ್ಲಿ ಕೆಲವರು ಪದೇ ಪದೇ ಬಂದು ಹೋಗಿ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು

ಹೇಳುವಿರಿ?

ಉತ್ತರಃ

ಪ್ರಶ್ನೆಃ 5 ಮುಂದುವರೆದು ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ತಮ್ಮ ತಂದೆ ನಡೆಸುತ್ತಿದ್ದ ವಿದ್ಯಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಸಾಕ್ಷಿ-2, 3 ಹಾಗೂ 4 ರವರು ತಮ್ಮ ಮನೆಯ ಗೇಟಿನ ಬಳಿ ನಿಂತುಕೊಂಡು ಮಾತನಾಡುತ್ತಿರುವಾಗ ಆರೋಪಿತನಾದ ನೀನು ಬಿಳಿ ಶರ್ಟ್ ಹಾಗೂ ಬಿಳಿ ಪ್ಯಾಂಟನ್ನು ತೊಟ್ಟುಕೊಂಡು, ಅಲ್ಲದೇ ಕೇಸರಿ ಶಾಲನ್ನು ಹಾಕಿಕೊಂಡು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಗುಂಪಿನೊಂದಿಗೆ ತಮ್ಮ ಮನೆಯ ಎದುರು ಬಂದು ತನ್ನ ತಂದೆಯನ್ನು ಉದ್ದೇಶಿಸಿ ಮನೆ ಕಡೆ ತೋರಿಸಿ ವಡ್ಡ ಸೂಳೇ ಮಗ ರಾಮನ ಮನೆ ಇದು, ಕೀಳು ಜಾತಿಯವನು ಎಂದು ಹೇಳಿರುವುದಾಗಿಯೂ, ಅಲ್ಲದೇ ಪೋಲೀಸರು ಇದ್ದಾರೆ ಎಂದು ತುಂಬಾ ನಿಗುರಾಡುತ್ತ ಇದ್ದಾನೆ, ಈತನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೈದಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆಃ 6 ಮುಂದುವರೆದು ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಸಂಜೆ 8-30 ಗಂಟೆಗೆ ತಾನು, ತನ್ನ ತಂದೆ ಹಾಗೂ ತನ್ನ ತಾಯಿ ಮನೆಯಿಂದ ಹೊರಗೆ ಹೋಗುತ್ತಿರುವಾಗ ಆರೋಪಿತನಾದ ನೀನು ತನ್ನ ತಂದೆಗೆ ದೂರವಾಣಿ ಮಾಡಿ ತನ್ನ ತಂದೆಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿಯೂ, ಅಲ್ಲದೇ ತನ್ನ ಮೇಲೆ ಯಾಕೆ ಕೇಸು ಹಾಕಿದ್ದೀಯಾ ಎಂದು ಹೇಳಿ ತನ್ನ ತಂದೆಗೆ ಬೈದಿರುವುದಾಗಿಯೂ, ಅಲ್ಲದೇ ತನ್ನ ಹಿಂದೆ ದೊಡ್ಡ ಶಕ್ತಿ ಇದೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ತನ್ನ ತಂದೆಗೆ ಬೆದರಿಕೆ ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆಃ 7 ಈ ಪ್ರಕರಣದಲ್ಲಿ ಫ್ರಾ.ಸಾ.3 ಯಶವಂತ ಬಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12-11-2019 ರಂದು ದಾವಣಗೆರೆಯ ಮಹಾನಗರ ಪಾಲಿಕೆಯ ಚುನಾವಣೆ ನಡೆಯುತ್ತಿದ್ದು, ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ತಾನು ಮತ್ತು ತನ್ನ ತಮ್ಮ ಚಾ.ಸಾ.4 ರವರು ಫ್ರಾ.ಸಾ.1 ರವರ ಮನೆಯ ಬಳಿ ಹೋದಾಗ ಅಲ್ಲಿ ಬಹಳಷ್ಟು ಜನರು ಸೇರಿಕೊಂಡಿರುವುದು ಕಂಡು ಬಂದಿರುತ್ತದೆ. ಆ ಸಮಯದಲ್ಲಿ ಓರ್ವ ವ್ಯಕ್ತಿಯು ಬಿಳಿಯ ಅಂಗಿ ಮತ್ತು ಪ್ಯಾಂಟನ್ನು, ಕಪ್ಪು ಬಣ್ಣದ ಕನ್ನಡಕವನ್ನು ಧರಿಸಿದ್ದು, ಆತ

ಫ್ರಾ.ಸಾ.1 ರವರ ಮನೆಯ ಕಡೆ ನೋಡಿ ಇದೇ ನೋಡಿ ಸೂಳೇಮಗ ವಡ್ಡ ರಾಮಪ್ಪನ ಮನೆ ಎಂದು ಹೇಳುತ್ತಿದ್ದ. ಅಲ್ಲದೇ ಪೋಲೀಸರು ಇವನ ರಕ್ಷಣೆಗೆ ಇದ್ದಾರೆ ಎಂದು ಮೊದಲಿನ ಮತದಾನದ ಸಮಯದಲ್ಲಿ ಫ್ರಾ.ಸಾ.1 ರವರು ಆರೋಪಿತನಾದ ನಿನ್ನ ಮೇಲೆ ನೀಡಿದ ದೂರಿನ ದ್ವೇಷದ ಮೇರೆಗೆ ಈತನನ್ನು ಬಿಡುವುದಿಲ್ಲ ಎಂದು ಸದರಿ ವ್ಯಕ್ತಿಯು ಹೇಳುತ್ತಿದ್ದ. ಸದರಿ ವ್ಯಕ್ತಿಯೇ ಈ ಪ್ರಕರಣ ಆರೋಪಿಯಾದ ನೀನು ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ -8 ಈ ಪ್ರಕರಣದಲ್ಲಿ ಫ್ರಾ.ಸಾ.4 ಜಯಣ್ಣ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12-11-2019 ರಂದು ತಾನು ಮತ್ತು ಚಾ.ಸಾ.3 ರವರು ಫ್ರಾ.ಸಾ.1 ರವರ ಮನೆಗೆ ಬೆಳಿಗ್ಗೆ 8-30 ಯಿಂದ 9-00 ಗಂಟೆ ಸಮಯದಲ್ಲಿ ತಮ್ಮ ಸಂಬಳದ ಕುರಿತು ವಿಚಾರಿಸಲು ಹೋಗಿದ್ದೆವು. ತಾವು ಅಲ್ಲಿಗೆ ಹೋದಾಗ ಅಲ್ಲಿ ಫ್ರಾ.ಸಾ.1 ರಿಂದ 3, ಚಾ.ಸಾ.4 ರವರು ಇದ್ದರು. ಸದರಿ ದಿನ ನಗರಸಭೆಯ ಎಲೆಕ್ಷನ್ ಇದ್ದು, ಫ್ರಾ.ಸಾ.1 ರವರ ಮನೆಯ ಎದುರು ಮತದಾನಕ್ಕಾಗಿ ಬಂದವರಿಗೆ ಚೀಟಿ ಬರೆದು ನೀಡಲು ಟೇಬಲ್ ಹಾಕಿದ್ದರು. ನಂತರ ಅಲ್ಲಿಗೆ 4 ರಿಂದ 5 ಜನ ಗುಂಪುಗೂಡಿ ಬಂದಿದ್ದು, ಅವರಲ್ಲಿ ಓರ್ವ ವ್ಯಕ್ತಿಯು ಆರೋಪಿಯಾದ ನೀನು ಆಗಿರುವುದಾಗಿಯೂ, ಆರೋಪಿಯಾದ ನೀನು ಆ ಸಮಯದಲ್ಲಿ ಫ್ರಾ.ಸಾ.1 ರವರ ಮನೆಯ ಕಡೆ ಕೈ ತೋರಿಸಿ ಇದು ವಡ್ಡ ರಾಮಪ್ಪನ ಮನೆಯ ಎಂದು ಹೇಳಿರುವುದಾಗಿಯೂ, ಆ ಸಮಯದಲ್ಲಿ ತಾನು ಮತ್ತು ಚಾ.ಸಾ.3 ಫ್ರಾ.ಸಾ.1 ರವರ ಗೇಟಿನ ಬಳಿ ನಿಂತಿದ್ದೆವು. ನಂತರ ಆರೋಪಿತನಾದ ನಿನ್ನ ಜೊತೆ ಇದ್ದ ವ್ಯಕ್ತಿಗಳಿಗೂ ಹಾಗೂ ಫ್ರಾ.ಸಾ.1 ರವರ ನಡುವೆ ಬಾಯಿಮಾತಿನ ಚಕಮಕಿಯಾಗಿರುತ್ತದೆ. ನಂತರ ಆ ಸಮಯದಲ್ಲಿ ಆರೋಪಿಯಾದ ನೀನು ಫ್ರಾ.ಸಾ.1 ರವರಿಗೆ ಸೂಳೆಮಗ ಬೋಳಿಮಗ ಎಂದು ಬೈದು, ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ -9 ಈ ಪ್ರಕರಣದಲ್ಲಿ ಫ್ರಾ.ಸಾ.5 ರಘು ಇವರು ತಮ್ಮ ಸಾಕ್ಷ್ಯದಲ್ಲಿ 2019 ರ ಮಹಾನಗರ ಪಾಲಿಕೆಯ ಚುನಾವಣೆ ದಿನದಂದು ತಾನು ಮತ್ತು ಫ್ರಾ.ಸಾ.4 ರವರು ಬೆಳಿಗ್ಗೆ 9-00 ಗಂಟೆಯ ಸಮಯದಲ್ಲಿ ಫ್ರಾ.ಸಾ.1 ರವರ ಮನೆಗೆ ಹೋಗಿದ್ದೆವು. ಆ ಸಮಯದಲ್ಲಿ ತಾವು ಅಲ್ಲಿ ತಮ್ಮ ಡಿ ದರ್ಜೆಯ ನೌಕರಿಯ ಕುರಿತಾಗಿ ಮಾತನಾಡಲು ಹೋಗಿದ್ದೆವು. ಆ ಸಮಯದಲ್ಲಿ ಅಲ್ಲಿ ಫ್ರಾ.ಸಾ.1 ರಿಂದ 3 ಹಾಗೂ ಚಾ.ಸಾ.4 ರವರು ಕೂಡ

ಇದ್ದರು. ಫ್ರಾ.ಸಾ.1 ರವರು ಮೊದಲು ಪ್ರಾಧ್ಯಾಪಕರಾಗಿಯೂ ನಂತರ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ. ತಾವು ಫ್ರಾ.ಸಾ.1 ರವರ ಮನೆಗೆ ಹೋಗಿ ಮಾತನಾಡಿಕೊಂಡು ಹೊರಗೆ ಬರುತ್ತಿರುವಾಗ ಆರೋಪಿಯಾದ ನೀನು ಫ್ರಾ.ಸಾ.1 ರವರ ಮನೆಯ ಕಡೆ ಕೈ ತೋರಿಸಿ ಇದು ವಡ್ಡ ಸೂಳೇ ಮಗ ರಾಮಪ್ಪನ ಮನೆಯ ಎಂದು ಕೇಳುತ್ತಿರುವುದಾಗಿಯೂ, ಅಲ್ಲದೇ ಐತೇ ಇವನಿಗೆ, ಇವತ್ತು ಪೋಲೀಸರು ಇದ್ದಾರೆ ಮುಂದಕ್ಕೆ ನೋಡಿಕೊಳ್ಳುತ್ತೇನೆ ಎಂದು ಹೇಳಿರುವುದಾಗಿಯೂ, ನಂತರ ಪೋಲೀಸರು ಅಲ್ಲಿಗೆ ಬಂದು ನಡೀರಿ ನಡೀರಿ ಎಂದು ಹೇಳಿ ಆರೋಪಿಯಾದ ನಿನ್ನನ್ನು ಹಾಗೂ ಇತರರನ್ನು ಅಲ್ಲಿಂದ ಕಳುಹಿಸಿರುತ್ತಾರೆ. ಈ ಹಿಂದೆ ನಡೆದ ಲೋಕಸಭಾ ಎಲೆಕ್ಸನ್ ನ ದ್ವೇಷದಿಂದ ಆರೋಪಿಯಾದ ನೀನು ಈ ರೀತಿಯಾಗಿ ಅಪರಾಧ ಮಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ-10 ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-11 ನಿಮ್ಮ ಪರ ಸಾಕ್ಷಿ ಮಾಡಿಸುವಿರಾ?

ಉತ್ತರಃ

(ಈ ಮೇಲೆ ಹೇಳಿದ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು, ಅದು ಆರೋಪಿಯು ನೀಡಿದ ನಿಜವಾದ ಹೇಳಿಕೆಯಾಗಿರುತ್ತದೆ ಎಂದು ದೃಢೀಕರಿಸುತ್ತೇನೆ)

ಇಂದು 09 ನೇ ತಾರೀಖು ಜುಲೈ 2026.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.